**ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ (ರಿ.), ಬೆಂಗಳೂರು – 560 023.**

## ದಿನಾಂಕ: 26–01–2026 ರಂದು ಆಚರಿಸಿದ

# ಗಣರಾಜ್ಯೋತ್ಸವದ

# ಸಚಿತ್ರಗಳ ಪಕ್ಷಿ ನೋಟ

**ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘವು ಭಾರತದ ಗಣ ರಾಜ್ಯೋತ್ಸವ ಕಾರ್ಯಕ್ರಮವನ್ನು ದಿನಾಂಕ: 26–01–2026 ರಂದು ಸೋಮವಾರದ ಬೆಳಿಗ್ಗೆ 09–00 ಗಂಟೆಯಿಂದ ಸಂಘದ ಧ್ವಜ ಸ್ಥಂಭದ ಬಳಿಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.**

**ಸಂಘದ ಆವರಣದಲ್ಲಿರುವ ಧ್ವಜ ಸ್ಥಂಭದ ಬಳಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಮತ್ತು ಸಂವಿಧಾನ ಶಿಲ್ಪಿ ಶ್ರೀ ಡಾ|| ಬಿ. ಆರ್. ಅಂಬೇಡ್ಕರ್ ರವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು.**











ಶ್ರೀಯುತ ಕೆ. ಬಿ. ಬೆಟ್ಟೇಗೌಡ, ಅಧ್ಯಕ್ಷರು, ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ, ಬೆಂಗಳೂರು ಹಾಗೂ ರವರು ಸಂಘದ ಕಾರ್ಯಕಾರೀ ಸಮಿತಿಯ ಸದಸ್ಯರು ಹಾಗೂ ಹಿರಿಯ ಸದಸ್ಯರೊಡಗೂಡಿ ಧ್ವಜಾರೋಹಣವನ್ನು ನೆರವೇರಿಸಿದರು.





ಹಾಜರಿದ್ದವರೆಲ್ಲರೂ ರಾಷ್ಟ್ರ ಧ್ವಜಕ್ಕೆ ವಂದನೆ ಸಲ್ಲಿಸಿದರು. ಧ್ವಜ ವಂದನೆ ಜೊತೆಗೆ ರಾಷ್ಟ್ರಗೀತೆ ಜನ-ಗಣ-ಮನ ವನ್ನು ನುಡಿಸಲಾಯಿತು. ರಾಷ್ಟ್ರಗೀತೆಯ ನಂತರ ವಂದೇ ಮಾತರಂ ರಾಷ್ಟ್ರಗೀತೆಯನ್ನು ಧ್ವನಿ ಮುದ್ರಿಕೆ ನುಡಿಸಿ ಎಲ್ಲರೂ ಧ್ವನಿ ಗೂಡಿಸಲಾಯಿತು.

ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರಾದ, ಶ್ರೀಯುತ ಎಮ್. ಎನ್. ಮಂಜೆಗೌಡ ರವರು ದೇಶಭಕ್ತಿ ಗೀತೆಯನ್ನು ಹಾಡಿ ಕಾರ್ಯಕ್ರಮಕ್ಕೆ ಮೆರುಗು ತಂದರು.



ಹಿರಿಯ ಸದಸ್ಯರೂ ಸೇರಿದಂತೆ ಹೆಚ್ಚಿನ ಸಂಖೆಯಲ್ಲಿ ಗಣರಾಜ್ಯೋತ್ಸವದ ಧ್ವಜಾರೋಹಣ ಕಾರ್ಯಕ್ರಮಕ್ಕೆ ಹಾಜರಾಗಿ ತಮ್ಮ ದೇಶ ಭಕ್ತಿಯನ್ನು ಮೆರೆದರು.



ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಉಪಾಧ್ಯಕ್ಷರಾದ, ಶ್ರೀಯುತ ಹೆಚ್. ಸುಬ್ಬಣ್ಣ ರವರು ಭಾರತವು ಪ್ರಾಸ್ತಾವಿಕ ನುಡಿಗಳೊಂದಿಗೆ ಆಗಮಿಸಿದ್ದ ಹಿರಿಯ ಸದಸ್ಯರೂ ಸೇರಿದಂತೆ ಎಲ್ಲ ಸದಸ್ಯರು ಹಾಗೂ ಸರ್ವರನ್ನೂ ಹೃತ್ಪೂರ್ವಕವಾಗಿ ಸ್ವಾಗತಿಸಿದರು.











ಹಿರಿಯ ಸದಸ್ಯರ ಭಾಷಣದಲ್ಲಿ, ಹಿರಿಯ ಸದಸ್ಯರಾದ ಶ್ರೀಯುತ ಜಿ. ವಿ. ತಿಮ್ಮೇಗೌಡರವರು ಗಣರಾಜ್ಯ ದಿನದ ಶುಭಾಶಯ ತಿಳಿಸಿ, ಚುಟುಕಾಗಿ ತಮ್ಮ ಭಾಷಣವನ್ನು ಮುಗಿಸಿದರು.

ಮತ್ತೊಬ್ಬ ಹಿರಿಯ ಸದಸ್ಯರಾದ ಶ್ರೀಯುತ ವಿ. ಎಸ್. ಪ್ರಭಾಕರ್ ರವರು ನಿವೃತ್ತಿ ನಂತರ ಪೊಲೀಸ್ ಅಧಿಕಾರಿಗಳು ಪ್ರಸ್ತುತ ಪೊಲೀಸ್ ವ್ಯವಸ್ಥೆಯಲ್ಲಿ ಅನುಭವಿಸು ಸಂಕಷ್ಟವನ್ನು ತೋಡಿಕೊಂಡರು. ಪೊಲೀಸ್ ಪ್ರಧಾನ ಕಛೇರಿಯ ಸುತ್ತೋಲೆ ಇದ್ದರೂ ಅದನ್ನು ಅನುಷ್ಠಾನಗೊಳಿಸದೇ ನಿವೃತ್ತ ಪೊಲೀಸ್ ಅಧಿಕಾರಿಗಳು ಮುಜುಗರವಾಗುವಂತೆ ವರ್ತಿಸುವ ಪೊಲೀಸರ ಬಗ್ಗೆ ಸಂಘವು ಮೇಲಧಿಕಾರಿಗಳ ಗಮನಕ್ಕೆ ತರಲು ವಿನಂತಿಸಿ ತಮ್ಮ ಭಾಷಣವನ್ನು ಮುಕ್ತಾಯ ಪಡಿಸಿದರು.



ತದನಂತರ, ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಶ್ರೀಯುತ ಕೆ.ಬಿ. ಬೆಟ್ಟೇಗೌಡ ರವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ, ಭಾರತೀಯ ಸಂವಿಧಾನದಲ್ಲಿರುವ ಮೂಲ ಭೂತ ಹಕ್ಕುಗಳ ಬಗ್ಗೆ ನುಡಿದು, ಇಲ್ಲೀವರೆಗೆ ಸಂವಿಧಾನದ ತಿದ್ದುಪಡಿಗಳ ಬಗ್ಗೆ ಚುಟುಕಾಗಿ ನುಡಿದು, ಗಣರಾಜ್ಯ ದಿನಾಚರಣೆಯ ಶುಭಾಶಯಗಳನ್ನು ತಿಳಿಸಿ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಸಂವಿಧಾನದ ಬಗ್ಗೆ ಕರೆ ನೀಡಿದರು.






ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ವಲಯ ಸಂಘಟನಾ ಕಾರ್ಯದರ್ಶಿಯವರಾದ ಶ್ರೀ. ಜಿ.ಎ. ಜಗದೀಶ್ ರವರು ಪ್ರತೀ ಮಾತುಗಾರರ ನಂತರ, ಅವರು ಆಡಿದ ಮಾತುಗಳ ಸಂಕ್ಷಿಪ್ತ ರೂಪಗಳನ್ನು ಪ್ರಸ್ತುತ ಪಡಿಸುತ್ತಾ ತಮ್ಮ ನಿರರ್ಗಳ ಮಾತುಗಳ ನಿರೂಪಣೆಯಿಂದ ಕಾರ್ಯಕ್ರಮಕ್ಕೆ ಶೋಭೆ ತಂದರು.





ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಕ್ಷೇಮಾಭಿವೃದ್ಧಿ ಸಂಘದ ಖಜಾಂಚಿಯವರಾದ ಶ್ರೀಯುತ ಎ. ಆರ್. ಬಡಿಗೇರ್ ರವರು ಸಂಘದ ಅಧ್ಯಕ್ಷರೂ ಸೇರಿದಂತೆ, ಹಿರಿಯ/ಕಿರಿಯ ಸದಸ್ಯರು, ಇನ್ನಿತರರು ಧ್ವಜಾರೋಹಣ ಕಾರ್ಯಕ್ರಮಕ್ಕೆ ಆಗಮಿಸಿ ಯಶಸ್ವಿಯಾಗಿ ಸಂಪನ್ನಗೊಳಿಸಿದುದನ್ನು ಸ್ಮರಿಸುತ್ತಾ, ಕೃತಜ್ಞತಾ ಪೂರ್ವಕ ಧನ್ಯವಾದಗಳ ವಂದನಾರ್ಪಣೆ ತಿಳಿಸಿದರು.





**ಸಂಘವು ಆಯೋಜಿಸಿದ್ದ ಸರಳ ಸಮಾರಂಭಕ್ಕೆ ಹಿರಿಯ/ಕಿರಿಯ ಸದಸ್ಯರು, ಇನ್ನಿತರರು ಹಾಜರಿದ್ದು ಸಮಾರಂಭದ ಸಂಭ್ರಮಕ್ಕೆ ಶೋಭೆ ತಂದು ಯಶಸ್ವಿಯಾಗಲು ಸಹಕರಿಸಿದರು.**

















**ಸಂಘವು ಆಯೋಜಿಸಿದ್ದ ಸರಳ ಸಮಾರಂಭಕ್ಕೆ ಹಿರಿಯ/ಕಿರಿಯ ಸದಸ್ಯರು, ಇನ್ನಿತರರು ಹಾಜರಿದ್ದು ಸಮಾರಂಭದ ಸಂಭ್ರಮಕ್ಕೆ ಶೋಭೆ ತಂದು ಯಶಸ್ವಿಯಾಗಲು ಸಹಕರಿಸಿದರು.**

ಸಂಘದ ವತಿಯಿಂದ ಎಲ್ಲರಿಗೂ ವ್ಯವಸ್ಥೆ ಮಾಡಲಾಗಿದ್ದ ಲಘು ಉಪಹಾರದೊಂದಿಗೆ ಕಾರ್ಯಕ್ರಮ ಸಮಾಪ್ತಿಯಾಗಿರುತ್ತದೆ.
































**ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆಯೋಜಿಸಿದ್ದ ಗಣರಾಜ್ಯೋತ್ಸವ ದಿನಾಚರಣೆ ಕಾರ್ಯಕ್ರಮ ಸಂಪನ್ನವಾಗಿರುತ್ತದೆ.**

**ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ (ರಿ.), ಬೆಂಗಳೂರು – 560 023.**

* * * * *